10 ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಂದೀಕೆರೆ ಹೋಬಳಿ ಸಾದರಹಳ್ಳಿ ಮತ್ತು ಸಾಲಕಟ್ಟೆ ಗ್ರಾಮಗಳ ನಡುವೆ ಇರುವ ಹಳೆಯ ಕಟ್ಟೆಯಂ ನೀರನ್ನು ಬಿಡುವ ಬಗ್ಗೆ

† ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಅಧ್ಯಕ್ಷರೇ, ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕು ಕಂದಿಕೆರೆ ಹೋಬಳಿ ಸಾದರಹಳ್ಳಿ ಮತ್ತು ಸಾಲಕಟ್ಟೆ ಮಧ್ಯೆ ಇರುವ ಸುಮಾರು ನೂರಾರು ವರ್ಷ ಹಳೆಯದಾದ ಭತ್ತಾರಹಳ್ಳಿಕಟ್ಟೆ ಇದ್ದು, ಈ ಕಟ್ಟೆಯ ನೀರು ತುಂಬಿ ಕಂದಿಕೆರೆ ಹಿರೇಕೆರೆಗೆ ಹೋಗಿ ಸೇರುತ್ತದೆ. ಸ್ವಾಭಾವಿಕವಾಗಿ ಹರಿದು ನಿಂಗಣ್ಣ ಹಳ್ಳ ಸೇರಿ ಹೀರೆಕೆರೆಗೆ ಬೀಳುತ್ತದೆ. ಆದರೆ ಇತ್ತೀಚೆಗೆ ಅಂದರೆ ಈ ವರ್ಷ ೧೯೫೪-೫೯ರಲ್ಲಿ ಸ್ವಾಭಾವಿಕವಾಗಿ ಹರಿದು ಹಳ್ಳ ಸೇರುವ ನೀರನ್ನು ಸಾದರಹಳ್ಳಿ ಗ್ರಾಮದ ಕಡ್ಲೆಹುಂಡೆ ಚನ್ನಬಸವಯ್ಯ ಎಂಬುವವರು ಮೂರೂಲಿ ಕರಿಯುತ್ತಿದ್ದ ನೀರಿಗೆ ಅಡ್ಡಲಾಗಿ ತಡೆ ಆಣೆಕಟ್ಟು ಕಟ್ಟಿ ಇತ್ತೀಚೆಗೆ ಭಾರೀ ಮಳೆಯಲ್ಲಿ ಬಂದ ಕೋಡಿನೀರು ಹಳ್ಳ ಸೇರದಂತೆ ತಡೆದು ಅದರ ಮುಂಭಾಗದಲ್ಲಿ ಸುಮಾರು ೫೦ ಎಕರೆಯಷ್ಟು ತೆಂಗಿನ ತೋಟಗಳು ಮತ್ತು ತಿರುಗಾಡುವ ರಸ್ತೆ ಮೇಲೆ ಸುಮಾರು ೫ಅಡಿಯಷ್ಟು ನೀರು ನಿಂತಿದ್ದು ಸುಮಾರು ೩೦ ಎಕರೆ ತೆಂಗಿನ ತೋಟ ಹಾಳಾಗುತ್ತಿರುತ್ತದೆ. ರಸ್ತೆಯಲ್ಲಿ ಜನ ಓಡಾಡದಂತೆ ಆಗಿದೆ. ಗ್ರಾಮದಲ್ಲಿ ಕಡ್ಲೆಹುಂಡೆ ಚನ್ನಬಸವಯ್ಯನವರು ತಮ್ಮ ಸರ್ವೆ ನಂಬರ್ ೮೭/೧ರಲ್ಲಿ ಕಟ್ಟಿರುವ ಆಣೆಕಟ್ಟನ್ನು ಬೆಗೆಸಲು ಹೋದವರಿಗೆ ಕಾಡುಗೋಲು ಮತ್ತು ದೊಣ್ಣೆಗಳಿಂದ ಹೊಡೆಯಲಂ ಬರುತ್ತಾರೆ. ಈ ತಡೆ ಆಣೆಕಟ್ಟಿನಿಂದ ನೀರು ತುಂಬಿ ನಿಂತಿರುವ ಬಡರೈತರ ಸಂಕಷ್ಟವನ್ನು ಕೇಳಿ ತಹಸೀಲ್ದಾರರು, ಅಸಿಸ್ಟೆಂಟ್ ಕಮಿಷನರ್, ಶಾಸಕನಾದ ನಾನಂ ಮತ್ತು ಜಿಲ್ಲಾ ಪರಿಷತ್ ಅಧ್ಯಕ್ಷರು, ಪೋಲೀಸ್ ಸಬ್‌ಇನ್‌ಸ್ಪೆಕ್ಟರ್, ಸರ್ಕಲ್ ಇನ್‌ಸ್ಪೆಕ್ಟರ್, ಡಿ.ವೈ.ಎಸ್.ಪಿ. ಮುಂತಾದವರಂ ಸ್ಥಳ ಪರಿಶೀಲನೆ ನಡೆಸಿ, ತಡೆ ಆಣೆಯಂ ನೀರನ್ನು ತಗೆಯುವಂತೆ ಎಷ್ಟು ಹೇಳಿದರೂ ಕೇಳುತ್ತಿಲ್ಲ. ಸ್ವಾಭಾವಿಕವಾಗಿ ಹರಿಯುವ ನೀರನ್ನು ತಡೆದು ಕರೆಗೆ ಹೋದಂತೆ ಮಾಡಿರುವ ವಿಚಾರವನ್ನು ಚಿಕ್ಕನಾಯಕನಹಳ್ಳಿ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್‌ರವರಿಗೆ ತಿಳಿಸಿದರೆ ಇದು ನಮಗೆ ಸಂಬಂಧಿಸಿದ ವಿಷಯವಲ್ಲ ಎಂದು ಹೇಳುತ್ತಾರೆ, ಜಿಲ್ಲಾ ಪರಿಷತ್ ಅಸಿಸ್ಟೆಂಟ್ ಇಂಜಿನಿಯರ್‌ರವರನ್ನು ಕೇಳಿದರೆ ಇದು ನೀರಾವರಿ ಇಲಾಖೆಗೆ ಸೇರಿದ್ದು ನನಗೆ ಬರುವುದಿಲ್ಲ ಎನ್ನುತ್ತಾರೆ. ಆದ್ದರಿಂದ ಈ ಬಗ್ಗೆ ಕೂಡಲೇ ಸೂಕ್ತ ಕ್ರಮ ಕೈಗೊಂಡು ಸದರಿ ತಡೆ ಆಣೆಯನ್ನು ತೆಗೆಯಿಸಿ ಜನರಿಗೆ ಆಗಿರುವಂತಹ ಅನಾಹುತವನ್ನು ತಡೆಗಟ್ಟಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ. ಹಾನಿಗೆ ಒಳಗಾಗಿರತಕ್ಕಂಥ ರೈತರ ಕಷ್ಟವನ್ನು ಪರಿಹರಿಸಬೇಕಾಗಿ ಕೋರುತ್ತೇನೆ.

ಶ್ರೀ ಸಿದ್ದರಾಮಯ್ಯ (ಸಾರಿಗೆ ಸಚಿವರು).—ಮಾನ್ಯ ಅಧ್ಯಕ್ಷರೇ ಈ ಬಗ್ಗೆ ಉತ್ತರ ತರಿಸಿ ಕೊಡುತ್ತೇನೆ.

11 ರಾಜ್ಯದಲ್ಲಿ ಗುತ್ತಿಗೆ ಆಧಾರದ ಮೇಲಿರುವ ಉಪಾಧ್ಯಾಯರುಗಳಿಗೆ ಬೇಸಿಗೆ ರಜೆ ನೀಡುವುದು

ಶ್ರೀ ಬಿ. ಸ್ವಾಮಿರಾವ್.—ಮಾನ್ಯ ಅಧ್ಯಕ್ಷರೇ ರಾಜ್ಯಾದ್ಯಂತ ಕಳೆದ ನಾಲ್ಕೈದು ವರ್ಷಗಳಿಂದಲೂ ಉಪನ್ಯಾಸಕರು ಹಾಗೂ ಉಪಾಧ್ಯಾಯರುಗಳು ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿದ್ದು ಅವರು ಈವರೆಗೆ ಬೇಸಿಗೆಯ ರಜಾ ವೇತನವನ್ನು ನೀಡುತ್ತಿದ್ದರು. ಆದರೆ ಇತ್ತೀಚೆಗೆ ಆಜ್ಞೆಯ ಪ್ರಕಾರ ಬೇಸಿಗೆಯ ರಜಾ ವೇತನ ನೀಡದಂತೆ ತಡೆಹಿಡಿಯಲಾಗಿದ್ದು ಈ ಬಗ್ಗೆ ಅವರುಗಳೇ ತಾರೀಖಿನಿಂದ ಧರಣಿ ಮುಷ್ಕರ ಹೂಡಿ ಉಗ್ರವಾಗಿ ಪ್ರತಿಭಟಿಸಲು ತೀರ್ಮಾನಿಸಿರುವುದರಿಂದ ಪರಿಸ್ಥಿತಿ ವಿಕೋಪಕ್ಕೆ ಹೋಗದಂತೆ ತಡೆಗಟ್ಟಲು ಹಾಗೂ ಪರಿಸ್ಥಿತಿಯನ್ನು ಸುಧಾರಿಸಲು ಅಣುವು ಆಗುವಂತೆ ಉಚ್ಚತವಂ ನ್ಯಾಯಾಲಯದವರು ೨೪೦ ದಿವಸಗಳವರೆಗೆ ಕೆಲಸ ಮಾಡಿರುವಪರನ್ನು ಖಾಯಂ ಮಾಡಬೇಕೆಂದು ನೀಡಿರುವ ತೀರ್ಪನ್ನು ಇವರಿಗೂ ಅನ್ವಯಿಸಿ ಗುತ್ತಿಗೆ ಶಿಕ್ಷಕರೆಲ್ಲರನ್ನೂ ಖಾಯಂ ಮಾಡಬೇಕೆಂದು ಸರ್ಕಾರವನ್ನು ನಾನು ಒತ್ತಾಯಿಸುತ್ತೇನೆ.